## ಒಂದು ಬೋಂಡ

ಬಹಳ ವರ್ಷಗಳ ಹಿಂದಿನ ಘಟನೆ. ಅದು ದಸರಾ ಸಮಯ. ಮೈಸೂರು ಮಹಾರಾಜರು ಅಂಬಾರಿಯಲ್ಲಿ ಕುಳಿತುಕೊಳ್ಳುವುದು ಅದೇ ಕೊನೆಯ ವರ್ಷ ಎನ್ನುವ ಸುದ್ದಿ ಹರಡಿತ್ತು. ಹೀಗಾಗಿ, ಅಂಬಾರಿ ನೋಡಲು ಮೈಸೂರಿಗೆ ಹೊರಟಿದ್ದೆ. ಹುಣಸೂರಿನಲ್ಲಿ ಕಾಫಿಗಾಗಿ ಬಸ್ಸು ನಿಲ್ಲಿಸಿದರು. ಅದು ಬಹಳ ಚಿಕ್ಕ ಹೋಟೆಲ್. ಜನ ತುಂಬಾ ಇದ್ದರು. ಹೀಗಾಗಿ, ಅದಾಗಲೇ ಇಬ್ಬರು ಕೊಡವರು ಕುಳಿತಿದ್ದ ಟೇಬಲ್ಲಿಗೆ ನಾನೂ ಕುಳಿತೆ. ಮಾಣಿ, 'ಸಾರ್, ಏನು ಕೊಡಲಿ?' ಎಂದು ಕೇಳಿದ. ನಾನು ಕಾಫಿ ಹೇಳಿದೆ. ಕೊಡವರಲ್ಲಿ ಒಬ್ಬ, 'ನೀಕ್ ಎಂತ ಬೋಂಡು?' (ನಿನಗೆ ಏನು ಬೇಕು) ಎಂದು ಕೇಳಿದ. ಇನ್ನೊಬ್ಬ, 'ನಾಕ್ ಒಂದೂ ಬೋಂಡ' (ನನಗೆ ಏನೂ ಬೇಡ) ಎಂದ. ಆಗ ಮೊದಲನೇಯವ, 'ಅಕ್ಕ, ನಾಕೂ ಒಂದು ಬೋಂಡ' (ಹಾಗಾದರೆ ನನಗೂ ಏನೂ ಬೇಡ) ಎಂದ. ಇದನ್ನು ಕೇಳಿಸಿಕೊಂಡ ಮಾಣಿ ನನಗೆ ಕಾಫಿ, ಅವರಿಗೆ ಒಂದೊಂದು ಬೋಂಡ ತಂದುಕೊಟ್ಟ!



**ಜಿ.ಬಿ. ರಾಘವೇಂದ್ರರಾವ್**

## ಕಣ್ಣೇಕೆ ಕೆಂಪು



ಕಲೆ: ಗಣೇಶ ಆಚಾರ್ಯ

ಮೊಮ್ಮಗಳು ಸಿರಿಗೆ ಮೂರು ವರ್ಷವಿದ್ದಾಗ ಮೊಬೈಲ್ ನೋಡುವುದು ಅಭ್ಯಾಸವಾಗಿತ್ತು. ಅದನ್ನು ತಪ್ಪಿಸಬೇಕೆಂದು ಮೊಬೈಲಿನ ಅಡ್ಡಪರಿಣಾಮಗಳ ಬಗ್ಗೆ ಹೇಳಿದ್ದೆ. 'ಮೊಬೈಲ್ ನೋಡಿದರೆ ಕಣ್ಣು ಉರಿಯುತ್ತವೆ, ಕೆಂಪಾಗುತ್ತವೆ, ದಪ್ಪ ಗ್ಲಾಸಿನ ಕನ್ನಡಕ ಬರುತ್ತದೆ. ಅದಕ್ಕೇ ಮೊಬೈಲ್ ನೋಡಬಾರದು' ಎಂದು ತಿಳಿಸಿದ್ದೆ. ಮನೆ ಮೇಲೆ ಹಕ್ಕಿಗಳಿಗೆ ಕಾಳು ಹಾಕುತ್ತ ಅವಳಿಗೆ ಊಟ ಮಾಡಿಸುತ್ತಿದ್ದಾಗ ಪಾರಿವಾಳಗಳನ್ನು ದಿಟ್ಟಿಸಿ ನೋಡಿದ ಸಿರಿ, 'ಅಲ್ನೋಡಜ್ಜಿ, ಪಾರಿವಾಳಗಳ ಕಣ್ಣು ಎಷ್ಟು ಕೆಂಪಾಗಿವೆ... ಅವು ಸಿಕ್ಕಾಪಟ್ಟೆ ಮೊಬೈಲ್ ನೋಡ್ತಾ ಇರಬೇಕು... ಅಷ್ಟೆಲ್ಲಾ ನೋಡಬಾರದು ಅಂತ ಹೇಳು ಮತ್ತೆ' ಎಂದಳು.

**ಉಮಾ ಬಸವಣ್ಣಪ್ಪ**